ಬೆಳಗಾವಿ ಜಿಲ್ಲೆಯ ಹೋರಾಟದ ವೈಶಿಷ್ಟ್ಯ

ಮುಂಬೈ ಪ್ರಾಂತದಲ್ಲಿ ಎಲ್ಲಕಡೆಗೂ ಚಳವಳಿ ತಣ್ಣಗಾಯಿತು. ಸಾತಾರಾ ಮತ್ತು ಬೆಳಗಾವಿ ಈ ಎರಡೂ ಜಿಲ್ಲೆಗಳು ಚಟುವಟಿಕೆ ಸಾಗಿಸಿದ್ದರಿಂದ ಪೋಲೀಸರಿಗೆ ತಮ್ಮ ಶಕ್ತಿಯನ್ನು ಈ ಎರಡೇ ಜಿಲ್ಲೆಗಳಮೇಲೆ ಕೇಂದ್ರೀಕರಿಸಲು ಅನುಕೂಲವಾಯಿತು. ಸಾತಾರಾ ಜಿಲ್ಲೆಯ ಚಳುವಳಿಯು ಬೇರೆ ದಾರಿಯನ್ನೇ ಹಿಡಿಯಿತು. " ಖಾಸಗಿಜನರ, ದೇವಸ್ಥಾನಗಳ ಆಸ್ತಿಗೆ ಕೈ ಹಚ್ಚಬಾರದು ಮತ್ತು ಯಾರಿಗೂ ದೈಹಿಕ ಹಿಂಸೆ ಕೊಡಬಾರದು " ಎಂದು ಕ್ರಾಂತಿಯ ಆರಂಭದಲ್ಲಿ ಪಾಲಿಸುತ್ತ ಬಂದ ಪಥ್ಯವನ್ನು ಪಾಲಿಸುವದು ಅವರಿಂದಾಗಲಿಲ್ಲ. ಶ್ರೀ ನಾನಾಪಾಟೀಲರ ಮುಖಂಡತ್ವದಲ್ಲಿ ಪತ್ರಿ ಸರಕಾರ ಸ್ಥಾಪನೆಯಾಗಿ ಹಿಂಸಾ ಚಾರಗಳೂ ಸುರು ಆದವು. ಶ್ರೀಯಶವಂತರಾವ ಚವಾಣರಂಥ ಕಾರ್ಯಕರ್ತರೂ ಜೇಜೂರಿಯ ಶ್ರೀ ಖಂಡೋಬಾ ದೇವಸ್ಥಾನದ ಲೂಟಿಗೆ ಪ್ರೋತ್ಸಾಹ ಕೊಟ್ಟರು. ದೇವಸ್ಥಾನದಲ್ಲಿದ್ದ ಬೆಳ್ಳಿ, ಬಂಗಾರ, ದುಡ್ಡು ಮತ್ತು ಬಂಗಾರದ ದೇವರ ಮೂರ್ತಿ ಎಲ್ಲವೂ ಲೂಟಿಯಾದವು ! ಇದರಿಂದಾಗಿ ಜನ ಸಾಮಾನ್ಯರ ಬೆಂಬಲ ಕಡಿಮೆ ಯಾಯಿತು. ಕೇವಲ " ದಹಶತವಾದ " ಹೆದರಿಕೆ ಬೆದರಿಕೆಯ ರಾಜಕಾರಣ ಸುರುವಾಯಿತು.

ನಮ್ಮ ಬೆಳಗಾವಿ ಜಿಲ್ಲೆಮಾತ್ರ ಕಡೆತನಕ ಅತ್ಯಂತ ಸಿಸ್ತಿನಿಂದ ಸಂಯಮದಿಂದ ಹರಿಜನ ಪತ್ರಿಕೆಯು ಹಾಕಿಕೊಟ್ಟ ಪಥ್ಯವನ್ನು ಪಾಲಿಸಿತು. ಬೆಳಗಾವಿ ಜಿಲ್ಲೆಯ ಮಾರ್ಗದರ್ಶನ ಗಾಂಧಿವಾದಿಯಾಗಿದ್ದ ಶ್ರೀ ವಾಮನರಾವ ದೇಸಾಯಿ ಬಿದರಿ ಯವರ ಕಡೆಗೆ ಇದ್ದದ್ದೇ ಇದಕ್ಕೆ ಕಾರಣವಾಯಿತು. ೧೯೩೦ ನೇ ಇಸವಿಯಿಂದ ಜಿಲ್ಲಾ ಕಾಂಗ್ರೇಸ ಸಂಘಟನೆಗಾಗಿ ಅವಿರತ ಅವಿಶ್ರಾಂತ ದುಡಿದ ಕೀರ್ತಿ ಇವರಿಗೇ ಸಲ್ಲುವದು. ಯಾವದೇ ಕಾರ್ಯಕ್ರಮ ನಿಶ್ಚಿತ ಮಾಡುವಾಗ ಇದು ತತ್ವದಲ್ಲಿ ಕೂಡುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಸುದೀರ್ಘ ಚರ್ಚೆ ಮಾಡುತ್ತಿದ್ದರು. ಮೇಲೆ ಹೇಳಿದ ಎರಡು ಪಥ್ಯಗಳಂತೂ (ಖಾಸಗಿ ಆಸ್ತಿಗೆ ಕೈ ಹಚ್ಚದಿರುವದು ಮತ್ತು ಯಾವದೇ ಹಿಂಸೆಮಾಡದಿರುವದು) ಅತ್ಯಂತ ಕಟಾಕ್ಷತೆಯಿಂದ ಅವರೂ ಕಾರ್ಯಕರ್ತರೂ ಪಾಲಿಸಿದರು. ಸಾಮಾನ್ಯವಾಗಿ ಇಡೀ ಬೆಳಗಾವಿ ಜಿಲ್ಲೆಯ ಎಲ್ಲ ಕಾರ್ಯಕರ್ತರ ತಂಡಗಳೂ ಶ್ರೀ ವಾಮನರಾಯರ ಸೂತ್ರಗಳನ್ನು ಪಾಲಿಸುತ್ತಿದ್ದರು. ಒಂದೆರಡುಕಡೆಗೆ ಕಾರ್ಯಕರ್ತರು ತಮಗೆ ತಿಳಿಯದೆ ಅಥವಾ ಭಾವಾವೇಶರಾಗಿ ಈ ಪಥ್ಯ ಪಾಲಿಸುವದರಿಂದ ತುಸು ಸರಿದಿರಬಹುದು. ಪ್ರತ್ಯಕ್ಷ ಸಂಬಧ ಸಂಪರ್ಕಗಳು ಇಲ್ಲದಿರುವದೇ ಇದಕ್ಕೆ ಕಾರಣವಾಗಿತ್ತು.

ಒಂದು ಘಟನೆಯನ್ನು, ತೀರ ಚಿಕ್ಕ ಘಟನೆಯನ್ನು, ಬರೆಯದೆ ಬಿಡುವಂತಿಲ್ಲ. ಮಂಟಿಮೂರಿಯ ಶ್ರೀ ವಾಮನರಾವ ಕುಲಕರ್ಣಿಯವರು ಮೊದಲಿನಿಂದಲೂ ಕ್ರಾಂತಿಕಾರಕ ಸಂಘಟನೆಯೊಂದಿಗೆ ಸಂಬಂಧವಿಟ್ಟುಕೊಂಡವರಾಗಿದ್ದರು. ಗಾಂಧೀಜಿಯವರ ಅಹಿಂಸಾವಾದ ಕಡೆತನಕ ಪೂರೈಸುವುದಿಲ್ಲವೆಂದು. ಶ್ರೀ. ಸಾವರಕರ, ಬಾಪಟ, ಸಿಂಗ ಮೊದಲಾದ ಕ್ರಾಂತಿವೀರರ ಮಾರ್ಗದ ಕಡೆಗೆ ಅವರ ಒಲವು ಇತ್ತು.

ಸ್ವತ: ನನ್ನದಾದರೂ (ಅಣ್ಣುಗುರೂಜಿ) ಮನಸ್ಥಿತಿ ಹೀಗೆಯೇ ಇತ್ತು, ಕ್ರಾಂತಿಕಾರಕರ ಬಗ್ಗೆ ನನಗೆ ಒಳ್ಳೇ ಆದರ ಅಭಿಮಾನಗಳಿದ್ದರೂ, ಗಾಂಧೀಜಿಯವರ ಶುದ್ಧ ಅಹಿಂಸೆಯಲ್ಲಿ ನನಗೆ ಅಷ್ಟು ನಂಬಿಗೆ ಇರದಿದ್ದರೂ, ಅಹಿಂಸೆಯನ್ನು ಸಿಸ್ತಿನ ಸ್ಟೆನಿಕನಂತೆ ಪಾಲಿಸುವವರಲ್ಲಿ ಯಾವ ಗಾಂಧಿವಾದಿಗಿಂತಲೂ ನಾನು ಹಿಂದೆ ಇದ್ದಿಲ್ಲವೆಂದು ಆತ್ಮವಿಶ್ವಾಸದಿಂದ ಹೇಳಬಲ್ಲೆ.

ಶ್ರೀ. ವಾಮನರಾವ ಕುಲಕರ್ಣಿಯವರೂ ನಮ್ಮ ತಂಡದೊಂದಿಗೇ ಸಂಪರ್ಕ ಹೊಂದಿದ್ದರು. ಒಂದು ದಿನ ಅವರು ಒಂದು ಗಾವತಿ ಪಿಸ್ತೂಲ ತಕ್ಕೊಂಡು ನಮ್ಮ ಕಡೆಗೆ ಬಂದಿದ್ದರು. ಒಳ್ಳೇ ಕುತೂಹಲದಿಂದ ಆಕ್ಕತಂಗೇರಹಾಳದ ಹೊಲದಲ್ಲಿ ನಮ್ಮ ಕಾರ್ಯಕರ್ತರು ಅದರ ಉಪಯೋಗ ಗಿಡದ ಮೇಲೆ ಮಾಡುತ್ತಿದ್ದಾಗ ಶ್ರೀ. ವಾಮನರಾವ ಬಿದರೀಸುವರು ಎಲ್ಲಿಯೋ ಹೋದವರು ಅಲ್ಲಿ ಬಂದರು. "ಇದೇನು ನಡೆದಿದೆ? ಎಲ್ಲಿಯ ಪಿಸ್ತೂಲು ಯಾರು ತಂದರು?" ಎಂದು ಕೇಳಿದಾಗ ಎಲ್ಲ ವಿವರ ಅವರಿಗೆ ತಿಳಿಯಿತು. ಅದು ನಮ್ಮ ಹತ್ತರವಿರಲಿ ಅದರ ಉಪಯೋಗ ಮಾಡದಿದ್ದರಾಯಿತು ಎಂದೇ ಎಲ್ಲರ ಅಭಿಪ್ರಾಯವಿತ್ತು. ಅದರೆ ಶ್ರೀ, ವಾಮನರಾವ ಬಿದರಿಯವರು ಅದನ್ನು ವಿರೋಧಿಸಿದರು, ಈ ಮೋಹ ಬೇಡ ಸಿಟ್ಟಿನ ಭರದಲ್ಲಿ ಅನಾಹುತವಾದೀತು ಎಂದು ಹೇಳಿ ಆ ಪಿಸ್ತೂಲ ತಮ್ಮ ಕಡೆಗೆ ತಕ್ಕೊಂಡು ಅದು ಯಾರಿಗೂ ಸಿಗದಂತೆ ಮಾಡಿಬಿಟ್ಟರು! ಇಷ್ಟು ಅವರ ತತ್ವನಿಷ್ಠೆ ಉಗ್ರವಾಗಿತ್ತು. ಹೇಯವಾದ ಒಂದೂ ಘಟನೆ ನಮ್ಮ ಕಾರ್ಯಕರ್ತರಿಂದ ನಡೆಯಲಿಲ್ಲ. ಅಂಥದನ್ನು ಪ್ರೋತ್ಸಾಹಿಸಲಿಲ್ಲ. ಎಲ್ಲಿಯೂ ಯಾರ ಖಾಸಗಿ ಆಸ್ತಿಗೆ ಕೈಹಚ್ಚಲಿಲ್ಲ, ಯಾರನ್ನೂ ದೈಹಿಕವಾಗಿ ಹಿಂಸಿಸಲಿಲ್ಲ. ಇಷ್ಟಾಗಿಯೂ ನಾವು ಮಾಡಿದ್ದೆಲ್ಲ ಗಾಂಧಿ ತತ್ವಕ್ಕೆ ಅನುಸರಿಸಿ ಇಲ್ಲವೆಂಬದು ನಮಗೆಲ್ಲರಿಗೂ ಗೊತ್ತಿತ್ತು, ಗಾಂಧೀಜಿಯವರು ಕ್ರಾಂತಿಯ ಕಹಳೆ ಊದಿ ಕಾರ್ಯಕ್ರಮ ಕೊಡುವಷ್ಟರಲ್ಲಿ ಅವರನ್ನೂ ಅವರ ಪ್ರಮುಖ ಸಹಕಾರಿಗಳನ್ನೂ ಸರಕಾರವು ಹಿಡಿದು ಜೇಲಿಗೆ ಹಾಕಿತ್ತು. ಇದು ಕಡೆಯ ಹೋರಾಟ, ಇದು ತುರಂಗ ಭರತಿಯ ಚಳವಳಿಯಲ್ಲ, "ಕರೇಂಗೆ ಯಾ ಮರೇಂಗೆ" ಎಂಬ ವೀರಗರ್ಜನೆ ಮಾಡುತ್ತ ಸಂಗ್ರಾಮದಲ್ಲಿ ಧುಮುಕಿರಿ, ಎಂದು ಮಾತ್ರ ಮುಖಂಡರು ಹೇಳಿ ಹೋದರು. ಕಾರ್ಯಕರ್ತರು ತಮಗೆ ಯೋಗ್ಯವೆನಿಸಿದ್ದನ್ನು ಮಾಡಿದರು, ಕ್ಷಾತ್ರ ತೇಜ ತೋರಿಸಿದರು, ಭಾರತ ಮಾತೆಯ ಋಣವನ್ನು ಅಂಶತಃ ಯಾಕಾಗಲೊಲ್ಲದು ತೀರಿಸಿದರು.

ಹೊರಗೆ ನಡೆದ ಕಾರ್ಯಕ್ರಮಗಳು ಗಾಂಧೀಜಿಯವರಿಗೆ ಸಮ್ಮತವಾಗಿರದಿದ್ದರೂ ಅವರು ಜೇಲಿನಲ್ಲಿರುವವರೆಗೆ ಎಂದೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿಲ್ಲವೆಂಬುದನು ನೆನೆದರೆ ಹೊರಗೆ ಕಾರ್ಯಕರ್ತರು ನಡೆಸುತ್ತಿರುವ ಚಟುವಟಿಕೆಗಳು ನಮ್ಮ ದೃಷ್ಟಿಯಿಂದ ಸಮರ್ಥನೀಯವೇ ಆಗಿದ್ದವು.

ನಮ್ಮ ಬಂಧನಗಳು–ಫಿತೂರಿಗಳ ಆಟ.

ಸಾತಾರಾ ಜಿಲ್ಲೆಯ ಶ್ರೀ. ಬರ್ಡೆ ಅವರ ಬಂಧನ.

ಎರಡು ವರ್ಷ ಹೋರಾಟ ನಡೆಯಿಸಿ ಕಾರ್ಯಕರ್ತರೂ ಜನತೆಯೂ ಬೇಸತ್ತಿದ್ದರು. ಪೋಲೀಸರಿಗೆ ಸಿಗದಂತೆ ಭೂಗತರಾಗಿ ಇರುವದೊಂದೇ ಕೆಲಸವಿದ್ದಂತಾಗಿತ್ತು. ಹಣದ ಅಮಿಷವೂ ದ್ರೋಹ ಬಗೆಯಲು ಸ್ವಾರ್ಥಿಗಳಿಗೆ, ಫಿತೂರಿಗಳಿಗೆ, ಕೈಮಾಡಿ ಕರೆಯುತ್ತಿತ್ತು. ಐದು ಸಾವಿರ ರೂಪಾಯಿಯ ಬಹುಮಾನದ ಆಕರ್ಷಣೆಯೇನೂ ಸಣ್ಣದಾಗಿದ್ದಿಲ್ಲ. ನಮ್ಮೊಡನೇ ಇದ್ದವರು, ನಮಗೆ ಸಹಾಯ ಮಾಡಿದವರು, ನಮ್ಮ ವಿಶ್ವಾಸ ಸಂಪಾದಿಸಿದವರು, ಹಣದಾಶೆಯಿಂದ ದ್ರೋಹ ಬಗೆದು ನಮ್ಮನ್ನು ಪೋಲೀಸರಿಗೆ ಹಿಡಿದು ಕೊಡುವ ಹೊಂಚು ಹಾಕಹತ್ತಿದರು. ೧೯೩೦–೩೨ ರ ಚಳುವಳಿಯಲ್ಲಿ ಸಾಕಷ್ಟು ಕೆಲಸ ಮಾಡಿ ಜೇಲಿಗೆ ಹೋಗಿದ್ದ ಹಾಗು ೧೯೪೨ ರಲ್ಲಿಯೂ ಕೆಲ ಕಾಲ ಸ್ಥಾನಬದ್ಧತೆಯಲ್ಲಿದ್ದ ಬೆಳಗಾವಿಯ ಶ್ರೀ. ಭಾರ್ಗವರಾಮ ಜುವೇಕರರು ವಿಶ್ವಾಸದಿಂದ ತಮ್ಮಲ್ಲಿಯೇ ತಂಗಿದ ಸಾತಾರಾ ಜಿಲ್ಲೆಯ ಭೂಗತ ಕಾರ್ಯಕರ್ತರಾದ ಶ್ರೀ. ಬರ್ಡೆ ಅವರನ್ನು ಮೋಸದಿಂದ ಒಂದು ಚಿತ್ರಮಂದಿರಕ್ಕೆ ಕರೆದೊಯ್ದು ಪೋಲೀಸರಿಗೆ ಹಿಡಿದು ಕೊಟ್ಟರು. ನಮಗೆ ಆಗಾಗ ಪೋಲೀಸರ ಚಲನವಲನದ ಬಗ್ಗೆ ಮಾಹಿತಿ ಕೊಡುತ್ತಿದ್ದ ಓರ್ವ ಪೋಲೀಸನನ್ನೂ ಹಣವಾಶೆ ತೋರಿಸಿ ಈ ದ್ರೋಹದ ಕೆಲಸದಲ್ಲಿ ಜುವೇಕರರು ಉಪಯೋಗಿಸಿಕೊಂಡಿದ್ದರು. ಆದರೆ ಸಾತಾರಾ ಜಿಲ್ಲೆಯ ಕಾರ್ಯಕರ್ತರಿಗೆ ಈ ಸಮಾಚಾರ ತಿಳಿಯುತ್ತಲೆ ಅವರೆ ಒಂದು ರಾತ್ರಿ ಶ್ರೀ. ಜುವೇಕರರನ್ನು ಅವರ ಮನೆಯಲ್ಲಿಯೇ ಸಂಧಿಸಿ ಅಂಗಾಲಿಗೆ ತಗಡು ಬಡೆಯುವ ಹಾಗು ಪತ್ರಿ ಸರಕಾರದ ಅನ್ಯ ದಂಡೋಪಾಯದ ಭಯ ತಾಕಿ ತಿಂದ ಹಣವನ್ನು ಅವರಿಂದ ಹಾಗು ಆ ಪೋಲೀಸನಿಂದ ವಸೂಲ ಮಾಡಿದರಲ್ಲದೆ ಅವರ ಗಾದೀ ಕಾರಖಾನೆಯನೂ ತಮ್ಮ ವಶಕ್ಕೆ ತೆಗೆದುಕೊಂಡರು. ಪ್ರಾಣಭಯದಿಂದ ಜುವೇಕರರು ಈ ವಿಷಯದಲ್ಲಿ ಯಾರ ಮುಂದೆಯೂ ಬಾಯಿ ಬಿಚ್ಚಲಿಲ್ಲ. ಈ ಆಘಾತದಿಂದ ಜುವೇಕರರು ಸಾಯುವವರೆಗೂ ಸುಧಾರಿಸಿಕೊಳ್ಳಲಿಲ್ಲ.